ಕೇಳಿಸಲೇ ಇಲ್ಲ. 'ಅವ್ನ ಮೊಬೈಲು ಒಯ್ದಿದ್ದರೆ ಚೆನ್ನಾಗಿತ್ತು' ಅಂತ ಮಾರ್ಕ್ ಸಾಹೇಬರಿಗೆ ಮತ್ತೆ ಅನ್ನಿಸಿತು. ಜನ ನೋಡುತ್ತಿರುವಂತೆಯೇ ಇಬ್ಬರು ಪೀಸಿಗಳು ಕೂತಿದ್ದ ತೆಪ್ಪ ಹೆಣಗಳ ಹತ್ತಿರ ಹೋಯಿತು. ಒಬ್ಬ ಕೈಯಲ್ಲಿ ಕುಡುಗೋಲು ಹಿಡಿದು ಅವಕ್ಕೆ ಕಟ್ಟಿದ್ದ ಹಗ್ಗ ಕತ್ತರಿಸಿದ. ಆಮೇಲೆ ಮತ್ತೊಂದು ಹಗ್ಗವನ್ನು ಎರಡೂ ಹೆಣಗಳಿಗೆ ಕಟ್ಟಿದ. ಅದೇ ಹಗ್ಗವನ್ನು ತೆಪ್ಪಕ್ಕೆ ಬಿಗಿಯಾಗಿ ಕಟ್ಟಿದ.

ಏರಿಯ ಮೇಲೆ ನಿಂತ ಜನ ಶಹಬ್ಬಾಸ್ ಅಂದರು. ಮೂರು ದಿನ ನೀರಲ್ಲೇ ಕೊಳೆತ ಹೆಣಗಳಿಗೆ ಹಗ್ಗ ಬಿಗಿದ ಪೀಸಿಯ ಧೈರ್ಯವನ್ನು ಎಲ್ಲರೂ ಮೆಚ್ಚಿಕೊಂಡರು! ಅವನಿಗೆ ಎಷ್ಟು ದೊಡ್ಡ ಬಹುಮಾನ ಕೊಟ್ಟರೂ ಕಡಿಮೆ ಅಂತ ಒಬ್ಬಿಬ್ಬರು ಎಲ್ಲರಿಗೂ ಕೇಳುವಂತೆ ಹೇಳಿದರು. ಕೆಲವು ನಿಮಿಷ ಸುಧಾರಿಸಿಕೊಂಡ ಪೀಸಿಗಳು ನಿಧಾನವಾಗಿ ತೆಪ್ಪಗಳನ್ನು ಏರಿಯ ಕಡೆಗೆ ಚಲಿಸಲು ಗಳಗಳನ್ನು ನೀರಿನಲ್ಲಿ ಮೀಟತೊಡಗಿದರು.

ಸಂಜೆಯ ಗಾಳಿ ಜೋರಾಗಿ ಬೀಸುತ್ತಿದ್ದರಿಂದ ತೆಪ್ಪಗಳು ಕೆರೆಯ ದಂಡೆಗೆ ಬರಲು ಒಂದು ಗಂಟೆ ಬೇಕಾಯಿತು. ಚೇರ್ಮನ್ನರು, ಮಾರ್ಕ್ ಸಾಹೇಬರಾದಿ ಎಲ್ಲರೂ ಕ್ಷಣ ಕ್ಷಣಕ್ಕೆ ಹತ್ತಿರಕ್ಕೆ ಬರುತ್ತಿದ್ದ ತೆಪ್ಪಗಳು ಮತ್ತು ಹೆಣಗಳನ್ನು ನೋಡಲು ಕಾತುರರಾಗಿದ್ದರು.

'ಇವು ಹೆಣಗಳಲ್ಲ... ಹೊಲದಲ್ಲಿ ನಿಲ್ಲಿಸೊ ಬೆರ್ಚು(ಬೆದರುಗೊಂಬೆ)ಗಳು! ಅವಕ್ಕೆ ಬಟ್ಟೆ ಸುತ್ತಿದ್ದಾರೆ. ಒಂದಕ್ಕೆ ಬಣ್ಣದ ಸೀರೆ ಸುತ್ತಿದ್ದಾರೆ' ಅಂತ ಪೀಸಿಯೊಬ್ಬ ಐವತ್ತು ಮೀಟರು ದೂರದಿಂದಲೇ ಜೋರಾಗಿ ಕೂಗಿದ. ಅವನು ಹೇಳುತ್ತಿದ್ದದು ಸರಿಯಾಗಿ ಕೇಳಿಸದೆ ಚೇರ್ಮನ್ನರು ಏನು, ಜೋರಾಗಿ ಹೇಳಯ್ಯ ಅಂತ ಕೇಳ್ತಲೇ ಇದ್ದರು. ಪೀಸಿ ಹೇಳಿದ್ದನ್ನೇ ಹೇಳುತ್ತಲೇ ಇದ್ದ. ಅಂತೂ ಇಂತೂ ತೆಪ್ಪ ಕೆರೆಯ ದಡಕ್ಕೆ ಬಂದವು. ಪೀಸಿಗಳು ಹಗ್ಗ ಕಟ್ಟಿ ಎಳೆದು ತಂದಿದ್ದು ಬೆರ್ಚುಗಳನ್ನು!

ಮೂರು ದಿನ ನೀರಲ್ಲಿ ನೆಂದ ಬೆರ್ಚುಗಳನ್ನು ನೋಡುತ್ತಿದ್ದಂತೆ ಜನರ ಗುಂಪು ಹೋ ಎಂದು ಕೂಗಿತು. ಕೆಲವರಂತೂ ಕೇಕೆ ಹಾಕಿ ಬೊಬ್ಬಿರಿದರು... ಚೇರ್ಮನ್ನರು ಮತ್ತು ಮಾರ್ಕ್ ಸಾಹೇಬರು ಬಣ್ಣದ ಬಟ್ಟೆ ಸುತ್ತಿದ್ದ ಬೆರ್ಚುಗಳನ್ನೇ ನೋಡುತ್ತ ಪೆಚ್ಚಾಗಿ ನಿಂತುಬಿಟ್ಟರು.

## ಪ್ರೇಮಕುಮಾರ್ ಹರಿಯಬ್ಬೆ

ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮದವರು. ವೃತ್ತಿಯಿಂದ ಪತ್ರಕರ್ತ. ಈಗ ಬೆಂಗಳೂರಿನಲ್ಲಿ ವಾಸ. ಅವರ ಮೊದಲ ಕಥೆ ಪ್ರಕಟವಾದದ್ದು 1977ರಲ್ಲಿ. ಪ್ರಜಾವಾಣಿ, ಸುಧಾ, ಮಯೂರ ಪತ್ರಿಕೆಗಳಲ್ಲಿ 45ಕ್ಕೂ ಹೆಚ್ಚು ಕಥೆಗಳು ಪ್ರಕಟವಾಗಿವೆ. ಒಂದೆರಡು ಕಥೆಗಳು ಹಿಂದಿಗೆ ಅನುವಾದಗೊಂಡಿವೆ. ಸಾಹಿತ್ಯ ವಿಮರ್ಶೆ, ಸಿನಿಮಾ ಅವರ ಇನ್ನಿತರ ಆಸಕ್ತಿಗಳು.